ಶ್ರೀ ಬಿ. ವೈ. ನೀಲೇಗೌಡ.—ಬಹಳ ಜನರು ಅಲ್ಲಿ ಕಷ್ಟ ಸ್ಥಿತಿಯಲ್ಲಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರೇ ಒಂದು ಸಲ ತಿಳಿಸಿದ್ದರು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಲ್ಲೆಯಲ್ಲಿ 1,500 ರೂಪಾಯಿಗಳು ಮಾತ್ರ ಖರ್ಚಾಗಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಹೆಚ್ಚಿಗೆ ಅವಶ್ಯಕತೆಯಿಲ್ಲವೆಂದು ಭಾವನೆಯಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕು ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಕ್ಷಾಮ ಪರಿಸ್ಥಿತಿಯಿದೆಯೆಂಬುದನ್ನು ಮಂತ್ರಿಗಳವರು ಅಲ್ಲಿಗೆ ಬಂದಾಗ್ಗೆ ಅವರ ಗಮನಕ್ಕೆ ತಂದು ಅವರು ಕ್ಷಾಮವಿದೆಯೆಂಬುದನ್ನು ಮನಗೊಳ್ಳುವಂತೆ ಮಾಡಿದರೂ ಖರ್ಚು ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚು ಮಾಡುವುದನ್ನು ಜಿಲ್ಲಾ ಕ್ಷಾಮ ಪರಿಹಾರ ಸಮಿತಿಗೆ ಬಿಡಲಾಗಿದೆ. ಆ ಸಮಿತಿಯಲ್ಲಿ ಮಾನ್ಯ ಸದಸ್ಯರು ಇದ್ದಾರೆಂದು ಗೊತ್ತಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಖರ್ಚಾಗಿದ್ದರೂ ಇಲ್ಲಿ ಕೊಟ್ಟಿಲ್ಲವೆಂದು ಹೇಳಬಹುದೇ ?

(No answer)

ಶ್ರೀ ಜೆ. ಮಹಮ್ಮದ್ ಇಮಾಂ.—ಕೋಲಾರ ಡಿಸ್ಟ್ರಿಕ್ಟಿಗೆ ಮಿಕ್ಕ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗಿಂತ ಹೆಚ್ಚಿಗೆ ತಕಾವಿಸಾಲ, ಜಪ್ತಿನು ಆಬಾದು ಸಾಲ ಮುಂತಾದುವುಗಳನ್ನು ಕೊಡುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಹೋದವರ್ಷ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಅಲ್ಲಿನ ಪರಿಸ್ಥಿತಿ ಸ್ವಲ್ಪ ಬಿಗಡಾಯಿಸಿತ್ತು, ಆದ್ದರಿಂದ ಕೊಟ್ಟಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅದೇ ರೀತಿಯಲ್ಲಿ ಚಿತ್ರದುರ್ಗ, ತುಮಕೂರು ಡಿಸ್ಟ್ರಿಕ್ಟ್‌ಗಳಲ್ಲಿಯೂ ಪರಿಸ್ಥಿತಿ ಬಿಗಡಾಯಿಸಿತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನಂತರ ಕೆಲವು ತಿಂಗಳಲ್ಲೇ ಪರಿಸ್ಥಿತಿ ಸುಧಾರಿಸಿತು.

ಶ್ರೀ ಜೆ. ಮಹಮ್ಮದ್ ಇಮಾಂ.—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಗರಾಟೆ ಹೆಚ್ಚಿಗೆ ಮಾಡುತ್ತಾರೆಂದು ಹೆಚ್ಚಿಗೆ ಕೊಟ್ಟಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಗರಾಟೆಗೆ ಹೆದರಿ ಹೆಚ್ಚಿಗೆ ಕೊಡುವುದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಕೋಲಾರ ಡಿಸ್ಟ್ರಿಕ್ಟಿಗೆ ಕೊಟ್ಟಿರುವಂತೆ ದೂರದಲ್ಲಿರುವ ಡಿಸ್ಟ್ರಿಕ್ಟುಗಳಿಗೂ ಹೆಚ್ಚಿಗೆ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ದೂರ, ಹತ್ತಿರ ಎಂದು ನೋಡಿಕೊಂಡು ಕೊಡುವುದಿಲ್ಲ. ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಅಲ್ಲಿನ ಪರಿಸ್ಥಿತಿ ನೋಡಿಕೊಂಡು ಕೊಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಕೋಲಾರ ಡಿಸ್ಟ್ರಿಕ್ಟಿನವರು ಆಂಧ್ರ ಪ್ರಾಂತ್ಯಕ್ಕೆ ಸೇರುತ್ತೇವೆಂದು ಹೇಳಿಂವಾಗ ಅಲ್ಲಿಗೆ ಖರ್ಚು ಮಾಡುವುದನ್ನು ಕಡಮೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡೋಣ.

Takavi and land improvement loans granted in Magadi Taluk.

Q.—608. Sri S. SIDDAPPA (Magadi).—

Will the Government be pleased to state :—

(*a*) the amount allotted by them during 1951-52 for Magadi Tanluk towards land improvement loans, takavi loans, etc.;

(*b*) the number of loan applications received and the amount of loan applied for, the number of raiyats who were granted such loans and the amount of loans granted ?

A.—Sri KADIDAL MANJAPPA (Minister for Revenue and Public Works).—

		Rs.
(*a*) Land Improvement Loan	..	600
Takavi Loan	..	700

(*b*) *Land Improvement Loan.*—Five applications involving a sum of Rs. 5,000 were for disposal out of which one application involving a sum of Rs. 500 was granted.

Takavi Loan.—Ten applications involving a sum of Rs. 7,650 were for disposal, out of which one application involving a sum of Rs. 250 was sanctioned.

ಶ್ರೀ ಎಸ್. ಸಿದ್ದಪ್ಪ.—ಮಾಗಡಿ ತಾಲ್ಲೂಕಿಗೆಲ್ಲಾ ಜಪ್ತಿನು ಆಬಾದಿನ ಸಾಲಕ್ಕಾಗಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟೇಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಎರಡೇ.

ಶ್ರೀ ಎಸ್. ಸಿದ್ದಪ್ಪ.—ಆ ಪೈಕಿ ಒಬ್ಬರಿಗೆ ಮಾತ್ರ ಸಾಲಕೊಟ್ಟು ಉಳಿದವರಿಗೆ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮಿಕ್ಕವರು ಸರಿಯಾದ ಸೆಕ್ಯೂರಿಟಿ ಕೊಡಲಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಸಿದ್ದಪ್ಪ.—ರೋನ್ ಅರ್ಜಿಗಳು ಬಂದಿದ್ದರಲ್ಲಿ ಒಬ್ಬರಿಗೆ ಮಾತ್ರ ಸಾಲಕೊಟ್ಟು ಉಳಿದಿರುವವರಿಗೆ ಕೊಡದಿರುವುದರಿಂದ, ಬಡವರಿಗೆ ತೊಂದರೆ ಮಾಡಿದಂತಾಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಸಿದ್ದಪ್ಪ.—ಈ ಸಾಲಗಳನ್ನು ಕೊಡುವ ಉದ್ದೇಶ ಆ ಪ್ರಾಂತ್ಯದ ರೈತರಿಗೆ ಅನುಕೂಲವಾಗಬೇಕೆಂದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿದ್ದಪ್ಪ.—ಆ ಉದ್ದೇಶ ನೆರವೇರ ಬೇಕಾದರೆ ಅರ್ಜಿದಾರರಿಗೆ ಸಾಲಗಳನ್ನು ಆದಷ್ಟು ಬೇಗಕೊಡುವುದಕ್ಕೆ ಏರ್ಪಾಡುವ ಮಾಡುವುದು ನ್ಯಾಯ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಆದರೆ ಶರತ್ತೋಕ್ತ ವಿಧಿಗಳೆಲ್ಲಾ ಆಗಬೇಕು, ಅರ್ಜಿದಾರರೂ ಯುಕ್ತ ಸೆಕ್ಯೂರಿಟಿ ಕೊಡಬೇಕು.

Land granted for Temporary Cultivation from 1945-46.

Q.—669. Sri K. PANCHAKSHARIAH (Arsikere).—

Will the Government be pleased to state :—

(*a*) the extent of land granted in the State for temporary cultivation from 1945-46 to 1952-1953 ;

(*b*) of this, the number of acres granted to Shanbhogues and Patels ;

(*c*) the quantity of crops grown till now in the above land granted for temporary cultivation ;

(*d*) out of the land granted for temporary cultivation, the extent of land lying uncultivated ; and

(*e*) the extent of land granted for temporary cultivation to those who own lands and the extent granted to landless persons ?

A.—Sri KADIDAL MANJAPPA (Minister for Revenue and Public Works).—

(*a*) 1,29,011 acres and 18 guntas.

(*b*) 6,558 acres and 13 guntas.

(*c*) Not easily estimable.

(*d*) 31,848 acres and 24 guntas.

(*e*) Figures not available as no separate account of lands granted to those who own lands and to those who are landless are maintained under the Grow More Food Scheme.

ಶ್ರೀ ಕೆ. ಪಂಚಾಕ್ಷರಯ್ಯ.— ಸಾಗುವಳಿಯಾಗದೆ ಉಳಿದಿರುವ ಜಮೀನು 31,848 ಎಕರೆ 24 ಗುಂಟೆ ಗಳೆಂಬುದಾಗಿ ಹೇಳಿದ್ದೀರಿ. ಇದನ್ನು ವಾಪಸು ತೆಗೆದು ಕೊಂಡು ಬೇರೆಯವರಿಗೆ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.— ಸಾಗುವಳಿಯಾಗದೆ ಇದ್ದರೆ ವಾಪಸು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಪಂಚಾಕ್ಷರಯ್ಯ.— ಗ್ರೋಮೋರ್-ಫುಡ್ ಪ್ರಕಾರ ಕೊಟ್ಟಿರುವುದರಲ್ಲಿ ಎಷ್ಟೋ ಕಡೆ ಗೋಮಾಳ ಗಳಿಂದಲೇ ತೆಗೆದುಕೊಟ್ಟಿದ್ದಾರೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೋಮಾಳಗಳಿಂದಲೇ ಕೊಟ್ಟಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲೆಲ್ಲ ಗೋಮಾಳ ಹೆಚ್ಚಿಗೆಯಿದೆಯೆಂದು ಕಂಡುಬಂದಿದೆಯೋ ಅಲ್ಲ ಕೊಟ್ಟಿರಬಹುದು, ಅಷ್ಟೆ.

---

1 P.M.

Retrenchment in Adult Literacy Department.

Q.—542. Sri Y. M. CHANDRASEKHARAIAH (Kadur).—

Will the Government be pleased to state :—

(*a*) the total amount that is being spent for establishments of the Central, Divisional, District and Taluk Committees of the Adult Literacy Council ;

(*b*) whether Government have suggested a retrenchment to be effected in this Department as a measure of economy ;

(*c*) the action taken by them to effect savings in expenditure by retrenchment ?

A.—Sri H. SIDDAVEERAPPA (Minister for Home and Industries.) [On behalf of Sri A. G. RAMACHANDRA RAO (Minister for Law and Education)].—

(*a*) Total expenditure is Rs. 1,62,780 for 1951-52.

(*b*) No.

(*c*) Does not arise in view of the reply to (*b*).

ಶ್ರೀ ವೈ. ಎಂ. ಚಂದ್ರಶೇಖರಯ್ಯ.— ವಯಸ್ಕರ ಶಿಕ್ಷಣಕ್ಕೆ ರಾತ್ರಿಕಾಲ ಪಾಠಹೇಳುತ್ತಾರೆ. ಇದಕ್ಕೆ ಒಂದೂ ಮುಕ್ಕಾಲು ಲಕ್ಷ ಸಂಬಳಕ್ಕೆ ಹೋಗುತ್ತದಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.— ಅಂಕಿ ಅಂಶಗಳನ್ನು ಕೊಟ್ಟಿದೆ, ನೀವೇ ನೋಡಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.— ಇದರಲ್ಲ ಮೂರರಲ್ಲೊಂದುಭಾಗ ಆಫೀಸರುಗಳೇ ಇವ್ವಾರೆ, ಸುಮ್ಮನೆ ವ್ಯಾಕ್ಯಗಳಲ್ಲ ಓಡಾಡುತ್ತಿರುತ್ತಾರಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.— ಹಾಗೆ ಹೇಳುವುದ ಕ್ಕಾಗುವುದಿಲ್ಲ. ಎಷ್ಟು ಅವಶ್ಯಕವೋ ಅಷ್ಟು ಸಿಬ್ಬಂದಿ ನೇಮಿಸಿದ್ದಾರೆ, ಇದರಲ್ಲ ಎಷ್ಟು ಶಿಕ್ಷೆಂಚ್‌ಮಾಡಲು ಸಾಧ್ಯ ಎಂಬುದನ್ನು ಸರ್ಕಾರದವರು ಯೋಚನೆ ಮಾಡಿಲ್ಲ, ಬೇಕಾದರೆ ಪರಿಶೀಲಿಸಿ ನೋಡೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.— ಖರ್ಚಿನಲ್ಲ ಸುಮಾರು ಅರ್ಧದಷ್ಟು ಈ ಅಧಿಕಾರಿಗಳಿಗೇ ಖರ್ಚಾಗುತ್ತಿರುವುದು ಗಮನಕ್ಕೆ ಬಂದಿದೆಯೆ ?

Sri H. SIDDAVEERAPPA.— They are found to be necessary.